ಕುಟುಂಬಗಳಿಂದ ಬಂದಿದ್ದ ಬುದ್ಧ ಹಾಗೂ ಮಹಾವೀರ ಇಬ್ಬರಿಗೂ ತಾತ್ವಿಕವಾದ ಹಸಿವು ಇದ್ದದ್ದರಿಂದ ಅವರಿಗೆ ಗುರುವಾಗಿದ್ದವನು ಮಕ್ಕಲಿ ಗೋಸಾಲ. ಆದರೆ, ಬುದ್ಧಿಸ್ಟ್ ಮತ್ತು ಜೈನ ಪಠ್ಯಗಳಲ್ಲಿ ಗೋಸಾಲ ಅವರಿಬ್ಬರ ಒಡನಾಡಿಯಾಗಿದ್ದ ಎಂದು ದಾಖಲಿಸಿದ್ದಾರೆ. ಜೈನ ಧರ್ಮದ ಕೊನೆಯ ತೀರ್ಥಂಕರನಾದ ಮಹಾವೀರನಂತೆ, ಆಜೀವಿಕ ಪಂಥಕ್ಕೆ ಧರ್ಮದ ಸಾಂಸ್ಥಿಕ ರೂಪವನ್ನು ಕೊಟ್ಟವನು ಮಕ್ಕಲಿ ಗೋಸಾಲ. ಆದರೆ ಆತನಿಗಿಂತ ನೂರೈವತ್ತು ವರ್ಷಗಳ ಹಿಂದಿನಿಂದಲೂ ಆ ಧರ್ಮಕ್ಕೆ ಕ್ಷೀಣ ಇತಿಹಾಸವಿದೆ. ಅದರ ಬೇರುಗಳು ನಿಮಗೆ ಸಿಗುವುದು ಬುದ್ಧನ ಜಾತಕ ಕಥೆಗಳಲ್ಲೇ. ಆಗ ಆಜೀವಿಕವು ಭಾರತದ ಮೂರನೇ ಅತಿ ಮುಖ್ಯ ಧರ್ಮವಾಗಿತ್ತು ಎನ್ನುವ ಬಗ್ಗೆ ಸಾಮ್ರಾಟ್ ಅಶೋಕನ ಬಿಹಾರದ ಬಾರಾಬರ್ ಗುಹೆಗಳ ಶಾಸನದಲ್ಲಿ ಉಲ್ಲೇಖವಿದೆ. ಮಕ್ಕಲಿ ಗೋಸಾಲ ಸತ್ತ ನಂತರವೂ ನಾಲ್ಕು ನೂರು ವರ್ಷಗಳ ಕಾಲ ಜೈನ ಧರ್ಮಕ್ಕಿಂತಲೂ ಆಜೀವಿಕ ಧರ್ಮವು ಪ್ರಬಲ ಧರ್ಮವಾಗಿತ್ತು. ಜೈನ ಧರ್ಮಕ್ಕೆ ಅದು ತುಂಬ ಹತ್ತಿರವಾಗಿತ್ತು. ಗೋಸಾಲ ನಗ್ನವಾಗಿರುತ್ತಿದ್ದ. ನಗ್ನತೆಯನ್ನು ಜೈನ ಧರ್ಮಕ್ಕೆ ಕೊಟ್ಟವನೇ ಆತ ಅನ್ನೋ ಮಾತಿದೆ. ನಾನೇ ಕೊನೆಯ ತೀರ್ಥಂಕರ ಎಂದು ಆತ ಘೋಷಣೆ ಮಾಡಿಕೊಂಡಿದ್ದ. ಇಂದು ಅದರ ಅನುಯಾಯಿಗಳು ಜೈನ ಸೇರಿದಂತೆ ಬೇರೆ ಬೇರೆ ಧರ್ಮಗಳಲ್ಲಿ ಬೆರೆತುಹೋಗಿದ್ದಾರೆ. ಬೌದ್ಧ, ಜೈನ ಧರ್ಮಗಳಂತೆ ಅದಕ್ಕೆ ರಾಯಲ್ ಪ್ಯಾಟ್ರನೇಜ್ ಸಿಕ್ಕಲಿಲ್ಲ. ಬಹುಶಃ ಭಾರತದಲ್ಲಿ ಗುಲಾಮನೊಬ್ಬ ಸ್ಥಾಪಿಸಿದ ಏಕೈಕ ಧರ್ಮ ಆಜೀವಿಕ ಧರ್ಮ. ಕೋಲಾರಮ್ಮ ಆಜೀವಿಕರ ದೇವತೆ. ಕೋಲಾರಮ್ಮನ ಪೂರ್ವ ಹೆಸರು ಅಣ್ಣಮ್ಮ. ಬೆಂಗಳೂರಿನ ಅಣ್ಣಮ್ಮನಿಗಿಂತಲೂ ಹೆಚ್ಚು ಪ್ರಾಚೀನ ದೇವತೆ. ಅಣ್ಣಮ್ಮ, ಅಣ್ಣಪ್ಪ ಎನ್ನುವುದು ಇವತ್ತಿಗೂ ಜೈನ ಪರಂಪರೆಯ ಹೆಸರುಗಳಾಗಿರುವುದನ್ನು ನಾವು ಕಾಣಬಹುದು. ಐನೂರು ವರ್ಷಗಳ ಹಿಂದಿನವರೆಗೂ ಆಜೀವಿಕ ಧರ್ಮ ಕರ್ನಾಟಕದಲ್ಲಿ ಜೀವಂತವಾಗಿತ್ತು.

◆ **ಅಕಡೆಮಿಕ್ ಶಿಸ್ತಿನ ಹಂಗಿಲ್ಲದೇ ಸ್ವಯಂ ಅಧ್ಯಯನದಿಂದ ಸಂಶೋಧನೆಯನ್ನು ರೂಢಿಸಿಕೊಂಡವರು ನೀವು. ಅದರಲ್ಲೂ ಮುಖ್ಯವಾಗಿ ಅವೈದಿಕ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ನೆಲೆಗಳ ಹುಡುಕಾಟ, ಶಿವಸಂಸ್ಕೃತಿಯ ಶೋಧನೆಯಲ್ಲಿ ತೊಡಗಿದವರು. ಕೆಲವರು ನಿಮ್ಮ ದಾರಿಯನ್ನು ಶಂಭಾ ಪರಂಪರೆಯ ಮುಂದುವರಿಕೆ ಎಂತಲೂ ಗುರುತಿಸುತ್ತಾರೆ.**

